6

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಧೀಕ್ಷಕ ಇಂಜಿನಿಯರ್, ಭದ್ರಾ ಮೇಲ್ದಂಡೆ ಯೋಜನೆ, ಯೋಜನಾ ವೃತ್ತ,ನಂ.02, ವಿ.ಜ.ನಿ.ನಿ., ಚಿತ್ರದುರ್ಗ ಇವರ ಉಪಯೋಗಕ್ಕಾಗಿ ಹೊಸ ವಾಹನ ಖರೀದಿಸುವ ಕುರಿತು.

* * * * *

**ಓದಲಾಗಿದೆ :**

1. ವ್ಯವಸ್ಥಾಪಕ ನಿರ್ದೇಶಕರು., ವಿಶ್ವೇಶ್ವರಯ್ಯ ಜಲ ನಿಗಮ ಇವರ ಪತ್ರ ಸಂ:ವಿಜನಿ/ ಮುಆಅ/ವಾಖಅ /2020/446 ದಿನಾಂಕ:14.10.2020.
2. ಮುಖ್ಯ ಆಡಳಿತಾಧಿಕಾರಿ, ವಿಶ್ವೇಶ್ವರಯ್ಯ ಜಲ ನಿಗಮ ಇವರ ಪತ್ರ ಸಂ:ವಿಜನಿ/ಮುಆಕ/ ಸಿ3/ ವಾಹನ /2021/185, ದಿನಾಂಕ:20/26.07.2021.
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 215 ಶಿವಾನಿ 2017, ದಿನಾಂಕ:02.04.2018.

**ಪ್ರಸ್ತಾವನೆ :**

ಮೇಲೆ ಓದಲಾದ (1) ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ರವರು ಅಧೀಕ್ಷಕ ಇಂಜಿನಿಯರ್, ವಿ.ಜ.ನಿ.ನಿ., ಭದ್ರಾ ಮೇಲ್ದಂಡೆ ಯೋಜನಾ ವೃತ್ತ, ನಂ.02, ಚಿತ್ರದುರ್ಗ ಕಛೇರಿ ವ್ಯಾಪ್ತಿಯ ಕಾಮಗಾರಿಗಳ ಕಾಲ-ಕಾಲಕ್ಕೆ ನಡೆಸಬೇಕಾದ ಪರಿವೀಕ್ಷಣೆ ಮತ್ತು ಮೇಲ್ವಿಚಾರಣೆ ಹಿತದೃಷ್ಠಿಯಿಂದ ಅತ್ಯವಶ್ಯವಾಗಿರುವ ಒಂದು ಹೊಸ ಹುಂಡೈ 1.5 ಎಂಪಿಐಎಸ್ಎಕ್ಸ್ ವಾಹನವನ್ನು ಖರೀದಿಸಲು ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ ಹಾಗೂ ಓದಲಾದ (2) ರಲ್ಲಿ ಮುಖ್ಯ ಆಡಳಿತಾಧಿಕಾರಿ, ವಿ.ಜ.ನಿ.ನಿ. ಇವರು ಹೊಸ ವಾಹನ ಖರೀದಿ ಸಂಬಂಧ ಅಂಶವಾರು ಸಮರ್ಥನೀಯ ಮಾಹಿತಿಯನ್ನು ಪೂರಕ ದಾಖಲೆಗಳೊಂದಿಗೆ ಸಲ್ಲಿಸುತ್ತಾ ಸದರಿ ವಾಹನ ಖರೀದಿಯನ್ನು ಲೆಕ್ಕ ಶೀರ್ಷಿಕೆ:4701 ರಡಿ ವಾರ್ಷಿಕ ಕಾರ್ಯಕ್ರಮ ಪಟ್ಟಿಯಲ್ಲಿ ಅಳವಡಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗುವುದು ಎಂದು ವರದಿಸಿರುತ್ತಾರೆ.

2 . ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ:

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 15 ಎನ್ಎಂಎಸ್ 2020,**
**ಬೆಂಗಳೂರು, ದಿನಾಂಕ:22.04.2022**

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಅಧೀನದಲ್ಲಿ ಬರುವ ಅಧೀಕ್ಷಕ ಇಂಜಿನಿಯರ್, ಭದ್ರಾ ಮೇಲ್ದಂಡೆ ಯೋಜನಾ ವೃತ್ತ, ನಂ.02, ಚಿತ್ರದುರ್ಗ, ಇವರ ಉಪಯೋಗಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆದೇಶನುಸಾರ ರೂ.6.50 ಲಕ್ಷ (ರೂಪಾಯಿ ಆರು ಲಕ್ಷದ ಐವತ್ತು ಸಾವಿರಗಳು ಮಾತ್ರ) ಆರ್ಥಿಕ ಮಿತಿಯೊಳಗೆ (EX Show Room Rate) ಒಂದು ಹೊಸ ವಾಹನ ಖರೀದಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

2. ಸದರಿ ವಾಹನ ಖರೀದಿಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ:4701-132-ಬಂಡವಾಳ ವೆಚ್ಚಗಳಡಿ ಭರಿಸತಕ್ಕದ್ದು.

ಪುಟ-2 ಕ್ಕೆ

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 402 ಎಫ್.ಆರ್.ಸಿ. 2020(e) ದಿನಾಂಕ:24.03.2022 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

22/04/2022
**( ಮನೋಹರ ವೈ. ರೊಟ್ಟೆ)**
**ವಿಶೇಷ ಕರ್ತವ್ಯಾಧಿಕಾರಿ**
**ಜಲಸಂಪನ್ಮೂಲ ಇಲಾಖೆ**

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ ), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು (ಅಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ, ಬೆಂಗಳೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ) ಆರ್ಥಿಕ ಇಲಾಖೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು
6. ಜಂಟಿ ನಿರ್ದೇಶಕರು, ಬಿ.ಎನ್.ಎಂ.ಪಿ. ಕೆ.ಪಿ.ಸಿ.ಎಲ್. ಗ್ರೀನ್ ಬಿಲ್ಡಿಂಗ್, ಅರಮನೆ ರಸ್ತೆ, ಬೆಂಗಳೂರು.
7. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ.ಕೇಂದ್ರ, ಮುಖ್ಯ ಗೋಪುರ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ರವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
9. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು (ಕೃಭಾಜನಿ) ರವರ ಆಪ್ತ ಸಹಾಯಕರು, ಜಲಸಂಪನ್ಮೂಲ ಇಲಾಖೆ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

+++